Evalution of Zilla Parishad and Mandal Panchayats System

5101. SRI R. VENKATARAMAIAH (Mulbagal).-Will the Minister for Rural Development and Panchayat Raj and Wakfs and Animal Husbandary pleased to State ?

a) Whether the Government has undertaken to study either directly or through the Universities and other academic institutions, the "asset basis" (specifically land holdings) of the Members of the Zilla Parishads and Mandal Panchayats ?

b) If so, the amount allotted for these studies ?

SRI ABDUL NAZIR SAB (Minister for RD & PR.—

a) No

b) Does not arise

ಸಭೆಯೆ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಚ್. ವಿಶ್ವನಾಥಯ್ಯ.—ಮಾನ್ಯ ಅಧ್ಯಕ್ಷರೇ, ೧೯೬೬ನೇ ಇಸವಿಯ ಕರ್ನಾಟಕ ಕೃಷಿ ಉತ್ಪನ್ನಗಳ ಮಾರಾಟ (ನಿಯಂತ್ರಣ) ಶಾಸನದ ೧೫೩ನೇ ಕಲಮಿನ ಮೇರೆಗೆ ಸದರಿ ಶಾಸನದ ಶೆಡ್ಯೂಲಿಗೆ ತಿದ್ದುಪಡಿ ಮಾಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೭ನೇ ಜನವರಿ ೧೯೮೮ ರಂದು ಹೊರಡಿಸಲಾದ ಸಿ.ಎಂ.ಡಬ್ಲ್ಯೂ ೨೫೮ ಎಂ.ಎ.ಸಿ.೮೮ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯಂ ಮುಂದಿಡುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದಿಡಲಾಗಿದೆ.

ಶ್ರೀ ಜೆ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿ).—ಮಾನ್ಯ ಅಧ್ಯಕ್ಷರೇ, ೧೯೬೫ನೇ ಇಸವಿಯ ಕರ್ನಾಟಕ ಅರಣ್ಯ ಶಾಸನದ ೧೮೫ನೇ ಕಲಮಿನ ಮೇರೆಗೆ ದಿನಾಂಕ ೮ನೇ ಏಪ್ರಿಲ್ ೧೯೮೮ ರಂದು ಕ್ರಮಾಂಕ ಎ. ಎಫ್. ಎಫ್. ೧೭ ಎಫ್.ಎಫ್.ಐ. ೮೫ರ ಮೂಲಕ ೧೯೮೮ನೇ ಇಸವಿಯ ಕರ್ನಾಟಕ ಅರಣ್ಯ (ತಿದ್ದುಪಡಿ) ನಿಯಮದ ಬಗ್ಗೆ ಹೊರಡಿಸಲಾದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದಿಡಲಾಗಿದೆ.

ವರದಿಗಳನ್ನೊಪ್ಪಿಸುವುದು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಅಧ್ಯಕ್ಷರು, ಸಾರ್ವಜನಿಕ ಲೆಕ್ಕಪತ್ರ ಸಮಿತಿ).—ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಈ ಕೆಳಕಂಡ ವರದಿಗಳನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

ಅ) ನೀರಾವರಿ ಇಲಾಖೆಗೆ (ಕೃಷ್ಣ ಮೇಲ್ದಂಡೆ ಯೋಜನೆ) ಸಂಬಂಧಿಸಿದಂತೆ ಸಮಿತಿಯು ೧೨ನೇ ವರದಿಯಲ್ಲಿ (೮ನೇ ವಿಧಾನಸಭೆ) ಮಾಡಲಾಗಿದ್ದ ಶಿಫಾರಸ್ಸುಗಳ ಮೇಲೆ ಸರ್ಕಾರದವರು ತೆಗೆದುಕೊಂಡ ಕ್ರಮಗಳ ಬಗ್ಗೆ ಸಮಿತಿಯ ೩೩ನೇ ವರದಿ.

ಆ) ೧೯೮೪-೮೫ನೇ ಸಾಲಿನಲ್ಲಿ ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ ಪುರಸ್ಕೃತ ಅನುದಾನಗಳಿಗಿಂತ ಹೆಚ್ಚು ವೆಚ್ಚ ಮಾಡಿದ ಮತ್ತು ಖರ್ಚು ಹಾಕಿದ ಧನವಿನಿಯೋಗದ ಬಗ್ಗೆ ಸಮಿತಿಯ ೩೪ನೇ ವರದಿ.

ಇ) ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆಗೆ ಸಂಬಂಧಿಸಿದಂತೆ ೧೯೭೯-೮೦ನೇ ಸಾಲುಗಳಿಂದ ೧೯೮೪-೮೫ನೇ ಸಾಲುಗಳವರೆಗಿನ ಧನವಿನಿಯೋಗ ಲೆಕ್ಕಗಳು ಮತ್ತು